ವಾ ಥಿ ನ್ಲು ಮೈ
ಅವರ ಎರಡು ಕವಿತೆಗಳು

# ಮಂಜು

ಮುಂಜಾವದ ಮಂಜಿನ ಮಡುವನು
ಹಳುವಾರ ದಾಟುವಳು ಆಯಿ
ಅವಳ ಪ್ರತಿ ಹೆಜ್ಜೆಯೂ ನೆನಪಿಸುವುದು
ಇಬ್ಬನಿ ಹೊಳಪಿನ ಚಿಗುರು ಚಹಾದೆಲೆಗಳನು

ಚಹಾದ ತೋಟವನು ಸಾವಕಾಶವಾಗಿ
ಹಾದು ಬಂದ ಸೂರ್ಯನ ಬೆಳಕು
ನಾಜೂಕಾದ ಅಡಿಕೆ ಎಲೆಯ ಮೇಲೆ ಮೆಲ್ಲನೆ
ಜಾರುವುದು
ಸುಳಿಗಾಳಿಯ ನೆನಪಿನಿಂದ ಆಯಿ ಜೀಕುವಳು
ಜೀವ ಜೋಕಾಲಿ

ಬೀಳುತೇಳುತಾ ಗಿರ ಗಿರ ಸುತ್ತುತಾ
ಮತ್ತೆ ಮತ್ತೆ ನೆನಪಿಸಿಕೊಳ್ಳುವ ಸುರುಳಿ ಹೊಗೆಗೂ
ಕೂಡ
ತನ್ನ ಮನೆಗೆ ಮರುಳುವ ದಾರಿ ಗೊತ್ತು

ಯುದ್ಧ ಬಿಟ್ಟು ಹೋದದ್ದೆಲ್ಲವ ಮಟ್ಟಸ ಮಾಡಲು
ಅವಳು ಪ್ರತಿದಿನ ಸಂಜೆ
ಉದುರಿ ಬಿದ್ದ ಎಲೆಗಳನ್ನು ಗುಡಿಸಿ ಒಗೆಯುತ್ತಾಳೆ

ಅವಳು ನಡೆಯುತ್ತಾಳೆ ಮಳೆಯಲ್ಲಿ
ಕೊಡೆ ಹಿಡಿಯದೆ ಭಾರವಾದ ಹೆಜ್ಜೆಗಳನ್ನಿಟ್ಟು
ಬಿಟ್ಟು ಬಂದ ಮನೆಯ ಪರಿಮಳವ
ತನ್ನೆದೆಗೆ ಒತ್ತಿ ಹಿಡಿದು



# ತಾಳೆ ಮರ

ಕೆಂಪು ಬೆಟ್ಟದ ಇಳಿಜಾರಿನಲಿ
ಒಂಟಿ ತಾಳೆ ಮರವೊಂದು ಬಾಗಿ ನಿಂತಿತ್ತು
ಸದಾ ಸಂಗಾತಿಗಾಗಿ ಕಾಯುತ್ತಿರುವ ಹೆಣ್ಣಿನಂತೆ

ತಾಳೆ ಎಲೆಗಳ ಹೆಣೆದು ಸಣ್ಣ ಬುಟ್ಟಿ ಕಟ್ಟಿ ನಾವು
ದಾರಿಯುದ್ದಕ್ಕೂ ಮೆಕ್ಕೆಜೋಳದ ತೆನೆಗಳ ಜೊತೆ
ಊರಿನ ಕಥೆಗಳನೂ ಹೊತ್ತು ನಡೆದೆವು

ತಾಳೆಗರಿಯ ಪಕ್ಕೆಲುಬುಗಳಿಂದ ಮಾಡಿದ
ಕಸಬಾರಿಗೆ
ಬಾಗಿಲಲಿ ನಿಂತು
ಒಂದಾನೊಂದು ಕಾಲದಲಿ ತಾನು ಗುಡಿಸಿ ತಂದ
ಕಥೆಗಳನೆಲ್ಲಾ ಮೆಲುಕು ಹಾಕುತ್ತಿತ್ತು

ಅವಳು ಮೆಲ್ಲನೆ ಉಸರುವಳು
ತಾಳೆ ತೋಪಿನಲ್ಲಿ ಕುಣಿದಾಡುವ ಮಳೆಗಾಳಿಯ
ಕುರಿತು
ಯಾವತ್ತೂ ಒದ್ದೆಯಾಗದ ತನ್ನ ಉಡುಪು
ಮತ್ತದರ ತಾಜಾತನದ ಕುರಿತು

ಅವನು ಕತ್ತಿ ಹಿಡಿದು ಮರದಿಂದ ಮರಕ್ಕೆ
ಚಿಮ್ಮುತ್ತಾ ಹೋದ
ಚಂದ್ರನ ಬೆಳಕಿನಲಿ ಅವನ ನೆರಳು
ತೇಲಿ ಮುಳುಗಿ ಮುಳುಗಿ ತೇಲಿ ಮುಂದಕ್ಕೆ
ಸಾಗಿತು

ಛಾವಣಿಯಾಕಾರದ ನೆರಳಿನ ಕೆಳಗೆ
ಅವಳ ಮನೆಯನ್ನು ಹುಡುಕಿದೆ
ತಾಳೆ ಮರದ ಕೊಂಬೆಗಳು ಮಾತ್ರ
ಆಕಾಶದದೆಡೆಗೆ ತೋರಿಸಿದವು ಬೆರಳು ಚಾಚಿ